ಮುಖ ತೊಳೆದು ಮಾಮೂಲಿಯಂತೆ ತಂಗ್ಯನು ಗಂಗಾಳ ಹಾಕಿಕೊಂಡು ತಂಗಳನ್ನು ಜಡಿಯುತ್ತಿದ್ದ. ನೀರಿನ ಬಿಂದಿಗೆಯನ್ನು ಹೊತ್ತು ತಂದ ಮುದ್ದನುಮಕ್ಕ, ''ಅಪ್ಪಯ್ಯ ಯಾಸಟ್ಗೆ ಇವೊತ್ತು ಮಧ್ಯಾನುಕ್ಕೆ ಹೊಲ್ದ್ ಕೆಲ್ಸ ಏನೂ ಇಟ್ಕೊಬೇಡ, ವಡೇರಳ್ಳಿಯಿಂದ ಯಾರೊ ಹೆಣ್ಣು ಕಡೇರು ಬರ್ತಾರಂತೆ. ದೊಡ್ಡಯ್ಯ ಹೇಳ್ದ ನಮ್ಮ ಸಂಸಾರಕ್ಕೆ ಸಮ್ಮನ್ ಸರೋಗಂಗ್ವಳಂತೆ ಹುಡ್ಗಿ. ಏನೋ ರಂಗನಾಥ್ ಸ್ವಾಮಿ ದಯೆಯಿಂದು ಕೂಡಿ ಬಂದ್ರೆ ಸಾಕು. ನಂಗೂ ಐವೊತ್ತೊರ್ಷ ಆಯ್ತು. ಸಗ್ರಿ ಮೊದಲ್ನಂಗಿಲ್ಲ. ಕರ್ಗಡ್ಬು ಮಾಡಾನ ಅಂತ ಒಂದ್ಸೇರು ಬೇಳೆ ಬೇಯೋಕೆ ಇಟ್ಟಿದ್ದೀನಿ.'' ಎಂದಿದ್ದಳು. ತಂಗ್ಯನು ಕಡೆಯ ತುತ್ತನ್ನು ನುಂಗಿ, ''ಬರೋರು ಯಾವಾಗಾದ್ರೂ ಬರ್ಲಿ, ನೀನು ಕರ್ಗಡ್ಬು ಹನ್ನೆರಡು ಗಂಟೆಗೆಲ್ಲ ಮಾಡ್ಬಿಡು. ಹನ್ನೆರಡೂವರೆಗೆ ಕರೆಂಟ್ ಕೊಡ್ತಾರೆ. ಒಂದೆರ್ಡ ಗಂಟೆ ರಾಗಿ ಹೊಲುಕ್ಕೆ ನೀರ್ ಕಟ್ಟಿ ಬಂದ್ಬಿಡ್ತೀನಿ.'' ಎಂದು ಉದಾಸೀನವಾಗಿ ಕೈ ತೊಳೆದುಕೊಂಡಿದ್ದ. ತಂಗ್ಯನ ಈ ಉದಾಸೀನಕ್ಕೆ ಕಾರಣವಿಲ್ಲದೆ ಇರಲಿಲ್ಲ. ತಂಗ್ಯನಿಗೆ ಇಪ್ಪತ್ತೊಂದು ವರ್ಷ ತುಂಬಿದಾಗಲೇ ಮದುವೆ ಮಾಡಲು ರಂಗಶ್ಯಾಮಣ್ಣ ಮತ್ತು ಮುದ್ದನುಮಕ್ಕ ನಿರ್ಧರಿಸಿ ಹೆಣ್ಣು ತಲಾಶು ಮಾಡಲು ಶುರುಮಾಡಿದ್ದರು. ಆದರೆ, ಯಾಕೋ ಅಷ್ಟು ಸುಲಭವಾಗಿ ಹೆಣ್ಣು ಸೆಟ್ಟಾಗಿರಲಿಲ್ಲ. ಮುದ್ದನುಮಕ್ಕ ಧರ್ಮಸ್ಥಳದ ಮಂಜುನಾಥನಿಗೆ, 'ತಂಗ್ಯನಿಗೆ ಮದುವೆ ಆದ ತಿಂಗಳಿಗೇನೇ ಮಗ, ಸೊಸೇನ ಕರ್ಕೊಂಡು ನಿನ್ನ ದರ್ಶನಕ್ಕೆ ಬತ್ತೀವಪ್ಪ. ಇದೊಂದು ಕಾರ್ಯ ನೆರವೇರ್ಸಿ ಕೊಡು ಸ್ವಾಮಿ, ನಾನು ಇನ್ನೇನು ನಿನ್ತಾವ ಬೊಗ್ಸಿ ಬಂಗಾರ ಬೇಡ್ಕಂಬಲ್ಲ' ಎಂದು ಹರಕೆ ಕಟ್ಟಿ ಮೂರು ವರ್ಷಗಳಾಗ್ತ ಬಂದಿದ್ದರೂ, ಮಂಜುನಾಥಸ್ವಾಮಿಯು ತನ್ನ ಲಕ್ಷಾಂತರ ಭಕ್ತರ ಅಹವಾಲುಗಳನ್ನು ಆಲಿಸಿ, ಪರಿಹಾರ ಹುಡುಕುವ ಬಿಜಿ ಕೆಲಸದಲ್ಲಿ ತೊಡಗಿದ್ದರಿಂದ ಮುದ್ದನುಮಕ್ಕನ ಪ್ರಾರ್ಥನೆಯನ್ನು ಕಿವಿಗೆ ಹಾಕಿಕೊಳ್ಳಲಿಲ್ಲವೋ ಅಥವಾ ಹಾಕಿಕೊಂಡರೂ ಮರೆತು ಬಿಟ್ಟನೋ ಏನೋ ಯಾರಿಗೆ ಗೊತ್ತು. ಆದರೆ, ಮುದ್ದನುಮಕ್ಕ ಊರದೇವರಾದ ರಂಗನಾಥ ಸ್ವಾಮಿಯನ್ನು ಮಾತ್ರ ಪ್ರತಿನಿತ್ಯ ಕುಂತಾಗ, ಎದ್ದಾಗ, 'ಸ್ವಾಮಿ ಕಾಪಾಡಪ್ಪ ರಂಗನಾಥ' ಎಂದು ಕನವರಿಸಿಕೊಳ್ಳುತ್ತಲೇ ಇದ್ದಾಳೆ. ರಂಗನಾಥ ಸ್ವಾಮಿಯೂ 'ಹಿತ್ತಲ ಗಿಡ ಮದ್ದಲ್ಲ' ಎಂದು ಸ್ವಂತ ಊರಿನವಳಾದ ಮುದ್ದನುಮಕ್ಕನ ಪ್ರಾರ್ಥನೆಯನ್ನು ಉದಾಸೀನ ಮಾಡುತ್ತಲೇ ಬಂದಿದ್ದಾನೆ.

ಇತ್ತೀಚೆಗಂತೂ ಹಳ್ಳಿಗಳ ಕಡೆ ಕೂಡಾ ಮದುವೆಗೆ ಹೆಣ್ಣು ಗಂಡುಗಳನ್ನು ಸೆಟ್ ಮಾಡುವುದು ತೇನ್ ಸಿಂಗನು ಹಿಮಾಲಯದ ಎವರೆಸ್ಟ್ ಶಿಖರವನ್ನು ಏರಿದಷ್ಟೇ ಕಷ್ಟದ ಕೆಲಸವಾಗಿದೆ. ಒಂದು ಹೆಣ್ಣಿಗೆ ಒಂದು ಗಂಡನ್ನು ಅಥವಾ ಒಂದು ಗಂಡಿಗೆ ಒಂದು ಹೆಣ್ಣನ್ನು ದೇವರು ಹುಟ್ಟಿಸಿದಾಗಲೇ ಗಂಟು ಹಾಕಿರುತ್ತಾನಂತೆ. ಕೆಲವರಿಗೆ ಅಂಥ ಗಂಟು ಅರ್ಜೆಂಟಾಗಿ ಬಿದ್ದರೆ, ಇನ್ನು ಕೆಲವರಿಗೆ ತುಂಬಾ ಲೇಟಾಗಿ ಬೀಳುತ್ತದೆ. ನಾಲ್ಕು ವರ್ಷಗಳ ಹಿಂದೆ ಮೊಟ್ಟ ಮೊದಲು ತಂಗ್ಯನು ಹೆಣ್ಣು ನೋಡಲು ಹೋದಾಗ ಹೆಣ್ಣಿನ ಮನೆಯವರು ಒಬ್ಬಟ್ಟು ಮಾಡಿದ್ದರು. ಊಟ ಬಡಿಸುವಾಗ ಹೆಣ್ಣು ತಂಗ್ಯನಿಗೆ ಒಬ್ಬಟ್ಟು ಬಡಿಸಿದ್ದಳು. ತಂಗ್ಯನಿಗೆ ಹೆಣ್ಣು ತುಂಬಾನೇ ಹಿಡಿಸಿದ್ದಳು. ಊಟ ಮಾಡಿ ಮಾತುಕತೆಗೆ ಕುಂತಾಗ ಕೊರಳು ಮತ್ತು ಕೈಗಳಲ್ಲಿ ಬಂಗಾರದ ಒಡವೆಗಳನ್ನು ಮಸ್ತಾಗಿ ನೇತಾಕಿಕೊಂಡಿದ್ದ ಹೆಣ್ಣಿನ ಅಕ್ಕ ವೈಯ್ಯಾರದಿಂದ, ''ಬೆಂಗಳೂರಿನಾಗೆ ನಿಮಗೆ ಸ್ವಂತ ಮನೆ ಇದೆಯಾ?'' ಎಂದು ಕೇಳಿದ್ದಳು. ಆಯಮ್ಮ ಕೇಳಿದ ಪ್ರಶ್ನೆಯಿಂದ ತಬ್ಬಿಬ್ಬಾದ ರಂಗಶ್ಯಾಮಣ್ಣ, ''ಎಂಥ ಚಂದದ ಮಾತು ಕೇಳ್ತೀಯಮ್ಮಯ್ಯ ನೀನು. ಹಳ್ಳಿಲಿರೋರು ಬೆಂಗಳೂರಿನಾಗೆ ಯಾತುಕ್ಕೆ ಮನೆ ಕಟ್ಟಿಸ್ತಾರೆ. ಬೆಂಗಳೂರಿನಾಗೆ ಹತ್ತಡಿ ಭೂಮಿ ಖರೀದಿ ಮಾಡೋಕೆ ನಮ್ಮ ಹೊಲ, ಮನೆ ಮಾರಿದ್ರೂ ಸಾಲ್ಕಂಬತ್ರ್ಯೆತೆ. ತಮಾಷೆ ಮಾಡ್ತಿದ್ದಿಯೋ ಯಂಗಮ್ಮಯ್ಯ?'' ಎಂದು ಕೇಳಿಯೇ ಬಿಟ್ಟಿದ್ದ. ಅದಕ್ಕೆ ಉತ್ತರವಾಗಿ ಹೆಣ್ಣಿನ ಅಕ್ಕ ಸೆರಗಿನ ಒಳಗಿದ್ದ ಬಂಗಾರದ ನೆಕ್ಲೇಸನ್ನು ಸೆರಗಿನ ಮೇಲೆ ಎಳೆದುಕೊಂಡು,